ಅಧ್ಯಕ್ಷರು : ಹೆಸರು ಪ್ರಸ್ತಾಪ ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈಗ ಅವರಿಗೆ ಧಮಕಿ ಹಾಕಿದ್ದಾರೆ. ಅದರ ಬಗ್ಗೆ ಅವರು ಏನು ಹೇಳುತ್ತಾರೋ ಅದನ್ನು ಹೇಳಲಿ. ರಕ್ಷಣೆಯನ್ನು ಕೊಡುತ್ತೀರೋ ಇಲ್ಲವೋ? ಅಲ್ಲಿ ಪತ್ರಿಕಾಗೋಷ್ಠಿಯಲ್ಲಿ ಏನಾಯಿತು? ಆಮೇಲೆ ನಂತರದಲ್ಲಿ ಉಂಟಾದ ಘಟನೆಗಳು, ಅದರ ಬಗ್ಗೆ ಅವರು ರಕ್ಷಣೆ ಕೇಳಿದ್ದಾರೆ. ಇವತ್ತು ಪತ್ರಕರ್ತರು ರಕ್ಷಣೆಯನ್ನು ಕೇಳಿದ್ದಾರೆ. ಅದರ ಬಗ್ಗೆ ಏನು ಹೇಳುತ್ತಾರೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಇವತ್ತು ಪತ್ರಕರ್ತರ ರಕ್ಷಣೆ ಬಗ್ಗೆ ಅವರು ಹೇಳಬೇಕಾಗುತ್ತದೆ.

ಅಧ್ಯಕ್ಷರು : ಆಯಿತು ತಡೆಯಿರಿ, ಅವರು ಮಾತನಾಡುತ್ತಿದ್ದಾರೆ. ನೀವೇಕೆ ನಿಂತುಕೊಂಡ್ರಿ? ಮಧ್ಯದಲ್ಲಿ ಸುಮ್ಮನೆ ಎಲ್ಲಾ ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಎಂಪಿ ಅವರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಆದರೆ ಇವತ್ತು ಅಲ್ಲಿಯ ಪತ್ರಕರ್ತರು ರಕ್ಷಣೆಯನ್ನು ಕೇಳಿದ್ದಾರೆ. ಎಸ್‌ಪಿ ಅವರಿಗೆ ದೂರನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ರಕ್ಷಣೆಯನ್ನು ಕೊಟ್ಟಿದ್ದೀರೋ ಇಲ್ಲವೋ ಅಥವಾ ಅವರ ಸುರಕ್ಷತೆ ಬಗ್ಗೆ ಒಂದು ವಾತಾವರಣ ನಿರ್ಮಾಣ ಮಾಡುವಂಥದ್ದನ್ನು ಮಾಡುತ್ತೀರೋ ಇಲ್ಲವೊ? ಇದರ ಬಗ್ಗೆ ಉತ್ತರವನ್ನು ಹೇಳಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕರೆ, ನನಗೂ ಕೂಡ ಈ ಸುದ್ದಿ ಬಂದಿದೆ. ಮತ್ತೆ ನಾನೂ ಕೂಡ ಮೊನ್ನೆ ಸಾಕಷ್ಟು ಪತ್ರಿಕಾ ಅಕಾಡೆಮಿ ಸಭೆಗೆಲ್ಲಾ ಹೋಗಿದ್ದೇನೆ. ಇವತ್ತು ಪತ್ರಿಕಾ ಅಕಾಡೆಮಿ ಸಭೆಯಲ್ಲಿ ಹೋದಾಗ ಪತ್ರಕರ್ತರು ರಾಜ್ಯದ ಜನರ ಅಭಿಪ್ರಾಯವನ್ನು ವ್ಯಕ್ತಪಡಿಸುವ ರೀತಿಯಲ್ಲಿ ನಿರ್ಭಯವಾಗಿ ಅವರು ಕೆಲಸಕಾರ್ಯಗಳನ್ನು ಮಾಡಬೇಕು. ಇದಕ್ಕೆ ಬಹಳಷ್ಟು ಕಡೆ ಅವರು ತೊಂದರೆಗೂ ಈಡಾಗುತ್ತಿದ್ದಾರೆ. ಅಲ್ಲಿ ಕೋಲಾರದಲ್ಲಿ ಕೂಡ ಘಟನೆ ನಡೆಯಿತು. 1983 ರಲ್ಲಿ ಕ್ರಾಂತಿ ಸಂಪಾದಕರ ಕೊಲೆ ಗುಲ್ಬರ್ಗಾದಲ್ಲಿ ಆಯಿತು. ಇವೆಲ್ಲಾ ನಿದರ್ಶನಗಳು ಇದ್ದಾವೆ. ಅದಕ್ಕಾಗಿ ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಇಲ್ಲಿಗೆ ಬರುವುದಕ್ಕೆ ಮುಂಚೆ ವಿಧಾನ ಪರಿಷತ್ತಿನಲ್ಲಿ ಮಾತನಾಡಿದ್ದೇನೆ, ನಾವು ಎಲ್ಲಾ ಕಡೆಗೂ ಆದೇಶವನ್ನು ಕೊಟ್ಟಿದ್ದೇವೆ. ಡಿಜಿ ಮತ್ತು ಪೋಲೀಸ್ ಕಮೀಷನರ್‌ಗೂ ಕೂಡ ಹೇಳಿದ್ದೇವೆ. ಮತ್ತೆ ನಾವು ಪೂರ್ಣವಾದ ವರದಿಯನ್ನು ಇವತ್ತು ತರಿಸಿ ಎಲ್ಲಿ ಘಟನೆಯಾಗಿದೆ. ಪತ್ರಕರ್ತರಿಗೆ ಯಾರು ತೊಂದರೆ ಮಾಡಿದ್ದಾರೆ. ಎಲ್ಲಿ ಬಂಧಿಸಬೇಕು ಎಂಬ ಬಗ್ಗೆ ಎಲ್ಲಾ ಪರಿಶೀಲನೆ ಮಾಡುತ್ತೇವೆ ಮಾನ್ಯ ಜಗದೀಶ್ ಶೆಟ್ಟರ್‌ರವರ ಅಪೇಕ್ಷೆ ಸರ್ಕಾರದ್ದು ಇದೆ, ಅದನ್ನು ನಿಜವಾಗಿ ಕೂಡ ಮಾಡುತ್ತೇವೆ, ಮತ್ತೆ ಅದಕ್ಕೆ ನಾಳೆಯೇ ಅಥವಾ ನಾಡಿದ್ದೋ I will make a statement in the House.

(ಅಂಕೋಲ) : (ಎ) ವಿಷಯ : ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಜ್ಯದ ಹೆದ್ದಾರಿ ಅಭಿವೃದ್ಧಿ ಯೋಜನೆ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಕರ್ನಾಟಕ ರಾಜ್ಯದ ಹೆದ್ದಾರಿ ಅಭಿವೃದ್ಧಿ ಯೋಜನೆ, ಇದರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ಪ್ಯಾಕೇಜುಗಳಲ್ಲಿ ಆಗುತ್ತಿರುವ ವಿಳಂಬ ಕುರಿತು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ನಾನು ತಮಗೆ

ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾನು ಈಗಾಗಲೇ ಈ ವಿಷಯಗಳನ್ನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಮಾನ್ಯ ಪಿಡಬ್ಲ್ಯೂಡಿ ಮಂತ್ರಿಗಳು ಸಹಾ ನಿಯಮ 351 ರ ಅಡಿಯಲ್ಲಿ ಉತ್ತರವನ್ನೂ ಕೂಡ ದೊರಕಿಸಿಕೊಟ್ಟಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ KSHIP ನವರು ಅಂದರೆ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕೆಲವು ಪ್ಯಾಕೇಜುಗಳನ್ನು ತೆಗೆದುಕೊಂಡಿದ್ದಾರೆ. M 24, 25, 26, 27 ಮತ್ತು 28. ಇವೆಲ್ಲವೂ ಇಷ್ಟು ಅವಧಿಯೊಳಗೆ ಮುಗಿಯಬೇಕಾಗಿತ್ತು. ಆದರೆ ವಿಶೇಷವಾಗಿ M 25 ಅಂದರೆ ಶಿರಸಿ ಮತ್ತು ಯಲ್ಲಾಪುರದ ಮಧ್ಯೆ ಇರುವ ಪ್ಯಾಕೇಜು. ಈ ಕೆಲಸವು 1–10–2004 ಕ್ಕೆ ಮುಗಿಯಬೇಕಾಗಿತ್ತು. 50 ಕಿಲೋ ಮೀಟರ್‌ನ ಈ ಕೆಲಸ ಸುಮಾರು 17 ಕೋಟಿ ರೂಪಾಯಿ ಕೆಲಸ 1–10–2004 ಕ್ಕೆ ಮುಗಿಯಬೇಕಾಗಿತ್ತು. ಆದರೆ ಇದುವರೆಗೆ ಕೇವಲ ಮೂರು ಕಿಲೋಮೀಟರ್ ಮಾತ್ರ ಅದು ಅರ್ಧ ಕೆಲಸವನ್ನು ಮಾಡಿಬಿಟ್ಟಿದ್ದಾರೆ. ಇನ್ನು 47 ಕಿಲೋ ಮೀಟರ್ ಕೆಲಸಗಳು ಹಾಗೆಯೇ ಬಾಕಿ ಇದೆ. ಅದು ಮುಗಿದು ಮೂರು ತಿಂಗಳು ಆಗಬೇಕಾದಂಥ ಕೆಲಸಕ್ಕೆ ಕೇವಲ ಮೂರು ಕಿಲೋಮೀಟರ್ ಮಾತ್ರ ಆಗಿದೆ. ಇನ್ನು 47 ಕಿಲೋ ಮೀಟರ್ ಕೆಲಸ ಬಾಕಿ ಇದೆ. ಆದರೆ ಗುತ್ತಿಗೆದಾರರಿಗೆ ಶೇಕಡ 10 ಪರ್‌ಸೆಂಟ್ ದಂಡ ಹಾಕಿದ್ದೇವೆ. ಇನ್ನು ಅವರನು ಟರ್ಮಿನೇಟ್ ಮಾಡುವುದಕ್ಕೆ ಮಾತ್ರ. ನಮಗೆ ಉಳಿದಿರುವ ಅವಕಾಶ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈ ರೀತಿ ವಿಳಂಬ ಮಾಡುತ್ತಿರುವ ಗುತ್ತಿಗೆದಾರರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಮಗೆ ಇರುವ ತೊಂದರೆಗಳೇನು? ತಾವು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿಯೂ ಈ ವಿಷಯವನ್ನು ಪ್ರಸ್ತಾಪ ಮಾಡಿರುವುದರಿಂದಾಗಿ ಇದಕ್ಕೆ ತಾವು ಮತ್ತು ಮಾನ್ಯ ಮುಖ್ಯಮಂತ್ರಿಗಳ ಜೊತೆ ಸೇರಿ ಈ ಗುತ್ತಿಗೆದಾರರನ್ನು ಟರ್ಮಿನೇಟ್ ಮಾಡಿ ಕೆಲಸವನ್ನು ಸಮರ್ಪಕವಾಗಿ ಮಾಡುವ ಬೇರೆ ಗುತ್ತಿಗೆದಾರರಿಗೆ ಕೊಡಬೇಕು. ನಿಗದಿತ ಅವಧಿಯೊಳಗೆ ಈ ಕೆಲಸಗಳಾಗಬೇಕು. ಇದು ಬರೀ M 25 ಬಗ್ಗೆ ಮಾತ್ರವಲ್ಲ ಇನ್ನು ಅನೇಕ ಪ್ಯಾಕೇಜ್‌ಗಳು ಇದು ರಾಜ್ಯದ ರಸ್ತೆಗಳ ಅಭಿವೃದ್ಧಿ ಕುರಿತಂತೆ ಮಾಡಿರುವ ಪ್ಯಾಕೇಜ್‌ಗಳು, ಒಟ್ಟು ಸುಮಾರು 45 ಪ್ಯಾಕೇಜ್‌ಗಳಲ್ಲಿ ಕೇವಲ ಒಂಭತ್ತು ಪ್ಯಾಕೇಜ್‌ಗಳು ಮಾತ್ರ ಮುಗಿದಿದೆ. ಉಳಿದ ಪ್ಯಾಕೇಜ್‌ಗಳು ಮುಗಿದಿಲ್ಲ. ಹಾಗಾಗಿ ಬಹಳ ವಿಳಂಬವಾಗುತ್ತಿದೆ. ಇದರಿಂದ ಕರ್ನಾಟಕದ ರಸ್ತೆಗಳೆಲ್ಲಾ ಹಾಳಾಗಿ ಹೋಗಿದೆ. ಇದರ ಬಗ್ಗೆ ಸರ್ಕಾರದವರು ತಕ್ಷಣ ಗಮನವನ್ನು ಕೊಡಬೇಕು. ಮತ್ತು M 25 ಪ್ಯಾಕೇಜ್‌ನಲ್ಲಿ ರಸ್ತೆ ಹೊಂಡ ಬಿದ್ದುಹೋಗಿದೆ. ಓಡಾಡುವುದಕ್ಕೂ ಯೋಗ್ಯವಾಗಿಲ್ಲ, ಹಾಗಾಗಿ ಓಡಾಡುವುದಕ್ಕೆ ತಕ್ಷಣ ಇಲ್ಲಿಂದ ನಿರ್ದೇಶನವನ್ನು ಕೊಟ್ಟು ಅದಕ್ಕೆ Pothole ಅನ್ನು ಮುಚ್ಚಿಸಬೇಕು. ಈ ಕೆಲಸವನ್ನು ಆ ಗುತ್ತಿಗೆದಾರರಿಂದ ಮಾಡಿಸಬೇಕು ಇಲ್ಲದಿದ್ದರೆ ಇಲಾಖಾ ವತಿಯಿಂದಲಾದರೂ ತಾವೂ ಮಾಡಿಸಬೇಕೆನ್ನುವ ಆಗ್ರಹವನ್ನು ಮಾಡುತ್ತೇನೆ. ಮತ್ತು ಗುತ್ತಿಗೆದಾರರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಬದ್ಧವಾಗಿಯೇ ಇಲ್ಲವೋ ಅಥವಾ ಅದಕ್ಕೆ Pothole ಇರುವ ತೊಂದರೆ ತೊಡಕುಗಳೇನು ಎನ್ನುವುದನ್ನು ಸ್ಪಷ್ಟಪಡಿಸಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೇನು M 25 ಯಲ್ಲಾಪುರ ಶಿರಸಿ ರಸ್ತೆ ಮಧ್ಯೆ 1–10–2004 ಕ್ಕೆ ರಸ್ತೆ

ಕಾಮಗಾರಿ ಮುಗಿಯಬೇಕಾಗಿತ್ತು ಅದು ಮುಗಿದಿಲ್ಲ. ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎನ್ನತಕ್ಕ ಪ್ರಶ್ನೆ ಮಾಡಿದ್ದಾರೆ. ಈಗಾಗಲೇ ನಾವು ಕಾಂಟ್ರಾಕ್ಟರ್ ಮೇಲೆ ಫೈನಾಲ್ಟಿಯನ್ನು ಹಾಕಿದ್ದೇವೆ. ಆದರೆ ಒಂದೇ ಸಾರಿ ಕಾಂಟ್ರಾಕ್ಟರ್‌ಗೆ ಏನಾದರೂ ಮಾಡಿದರೆ ಅವರು ಕೋರ್ಟಿಗೆ ಹೋಗುತ್ತಾರೆ ಎನ್ನುವ ಉದ್ದೇಶದಿಂದಲೇ ನಾವು ಅವರಿಗೆ ಒಂದು ಸಾರಿ ಎರಡು ಸಾರಿ ಅವಕಾಶವನ್ನು ಕೊಟ್ಟಿದ್ದೇವೆ. ನಾನು ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ, ಅವರೇನಾದರೂ ಮಾಡುವುದಿಲ್ಲ ಎನ್ನುವ ಸನ್ನಿವೇಶಕ್ಕೆ ಬಂದರೆ ಅವರನ್ನು ವಜಾ ಮಾಡುವುದಕ್ಕೂ ನಾವು ರೆಡಿ ಇದ್ದೇವೆ. ಅದರಲ್ಲೇನೂ ಯಾವ ದಾಕ್ಷಿಣ್ಯವೂ ಇಲ್ಲ, ಆದರೆ ಅವರೇನಾದರೂ ಕೋರ್ಟಿಗೆ ಹೋಗಿ ಮತ್ತೆ ಎರಡು–ಮೂರು ವರ್ಷ ಕೆಲಸ ಕುಂಠಿತವಾಗುತ್ತದೆ ಎನ್ನುವ ದೃಷ್ಟಿಯಲ್ಲಿ ನಾವು ಇದನ್ನು ಮಾಡಿದ್ದೇವೆ. ತಾವೇನು ಹೇಳಿದ್ದೀರಿ, ಅದನ್ನು ನಾನು ಸಂಬಂಧಪಟ್ಟ ಅಧಿಕಾರಿಗಳ ಕಡೆಯಿಂದ ಯಾರು ಕಂಟ್ರಾಕ್ಟರ್ ಇದ್ದಾರೆ, ಅವರು ಕೂಡಲೇ ಕಾಮಗಾರಿಯನ್ನು ಮುಗಿಸುವುದಕ್ಕೆ ನಾನು ಸೂಚನೆಯನ್ನು ಕೊಡುತ್ತೇನೆ. ಅವರೇನಾದರೂ ಮಾಡುವುದಿಲ್ಲವೆಂದರೆ ಅವರ ಮೇಲೆ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳುವುದಕ್ಕೂ ನಾನು ಸಿದ್ಧನಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಓಡಾಡುವುದಕ್ಕೆ ಯೋಗ್ಯವಾದ ರೀತಿಯಲ್ಲಾದರೂ Pothole ನ್ನಾದರೂ ಮಾಡಿಸಿ.

ಅಧ್ಯಕ್ಷರು : ಹೇಳಿದ್ದಾರಲ್ಲಪ್ಪ, ಆಯಿತು. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು.

(ಐ) ವಿಷಯ : ಹಲಸೂರು ಲೇಕ್‌ನಲ್ಲಿ ಮೀನುಗಳ ಸಾವಿನ ಬಗ್ಗೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ ಇವತ್ತು ಬೆಳಿಗ್ಗೆ ಹಲವಾರು ಪತ್ರಿಕೆಗಳಲ್ಲಿ ನಾವೊಂದು ಸುದ್ದಿಯನ್ನು ಓದಿದ್ದೇವೆ. ಹಲಸೂರು ಲೇಕ್‌ನಲ್ಲಿ ಮೀನುಗಳ ಸಾವು" ಎಂಬ ವಿಚಾರ ಇವತ್ತು ಪತ್ರಿಕೆಗಳಲ್ಲಿ ಬಂದಿದೆ. ಅದಕ್ಕೆ ಅಧಿಕಾರಿಗಳ ಹೇಳಿಕೆ ಪತ್ರಿಕೆಯಲ್ಲಿ ಬಂದಿರುವಂತೆ Deplutation of oxgen ಕಾರಣ ಇತ್ತೀಚೆಗೆ ಕಾರ್ಪೋರೇಷನ್‌ನವರು ಲಕ್ಷಾಂತರ ರೂಪಾಯಿ ಖರ್ಚನ್ನು ಮಾಡಿ ಶುದ್ಧೀಕರಣವನ್ನು ಮಾಡಿದಂತಹ ಒಂದು ಕೆರೆಯಲ್ಲಿ ಆಕ್ಸಿಜನ್ ಡಿಪ್ಲೀಷನ್ ಹೇಗೆ ಆಗುತ್ತದೆ ಎಂಬುದು ನನಗೆ ಗೊತ್ತಿಲ್ಲ. ಒಂದು ಸುದ್ದಿ ಪ್ರಕಾರ ಹಲಸೂರು ಲೇಕ್‌ನಲ್ಲಿ ಸ್ವಿಮ್ಮಿಂಗ್ ಪೂಲ್‌ನಲ್ಲಿ ಕೆಮಿಕಲ್ಸ್ ಹಾಕಿ ಅದನ್ನೆಲ್ಲಾ ವಾಶ್ ಮಾಡಿ ಅದನ್ನು ಹಲಸೂರು ಕೆರೆಗೆ ಬಿಟ್ಟಿದ್ದರಿಂದ ಈ ಮೀನುಗಳ ನಾವು ಆಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಅದರ ಬಗ್ಗೆ ಮಾನ್ಯ ಮೀನುಗಾರಿಕೆ ಸಚಿವರು ಯಾರು ಎಂದು ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲು ಇಚ್ಛೆಪಡುತ್ತೇನೆ. ಅವರು ಅದರ ಬಗ್ಗೆ ತನಿಖೆ ಮಾಡಬೇಕು. ತನಿಖೆ ಮಾಡಿ ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾನು ಯಾರಿಗೆ ವಿಷಯ ಹೇಳಿದೆ ಎಂಬುದು ನನಗೇ ಗೊತ್ತಿಲ್ಲ. ನಾನು ಏನನ್ನು ಹೇಳಿದೆ? ಯಾರಿಗೆ ಹೇಳಿದೆ ಎಂದು ನನಗೇ ಗೊತ್ತಿಲ್ಲ. ಉತ್ತರ ಯಾರು ಕೊಡುತ್ತಾರೆಂದು ನನಗೆ ಗೊತ್ತಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮೂರು–ನಾಲ್ಕು ದಿವಸದಿಂದ ಸಾವಿರಾರು ಮೀನುಗಳು ಸತ್ತು ಹೋಗಿವೆ ಎಂದು ಹೇಳಿ ಇವತ್ತು ಪತ್ರಿಕೆಯಲ್ಲಿ ಬಂದಿರತಕ್ಕ ಮಾಹಿತಿಯನ್ನು ಆಧರಿಸಿ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಈಗಾಗಲೇ ಸರ್ಕಾರದ ಗಮನಕ್ಕೆ ಈ ವಿಚಾರವನ್ನು ತಂದಿದ್ದಾರೆ.